# IN THE COURT OF THE ADDL. SENIOR CIVIL JUDGE & JMFC., GUBBI
# **OS – 40/2023**

Witness present and duly sworn on : 12.11.2025.

Further cross Examination: by Counsel for Defendants :

ಸರ್ವೆ ನಂ.32/4 ನನ್ನ ತಂದೆಗೆ ಹೇಗೆ ಬಂದಿತು ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ಅಳತೆಯ ಮುನ್ನ ಅಳತೆಗೆ ಕಾರ್ಯಕ್ಕೆ ಬೇಕಾಗುವ ಶುಲ್ಕವನ್ನು ಜಮಾ ಮಾಡಿರುವ ಬಗ್ಗೆ ರಶೀದಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ವಕೀಲರಿಗೆ ಕೊಟ್ಟಿರುತ್ತೇನೆ. ಮೇ-2020 ರಲ್ಲಿ ಸರ್ವೆ ಇಲಾಖೆಯವರು ಅಳತೆ ಕಾರ್ಯಕ್ಕೆ ಬಂದಿದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರಿ ಸಮಯದಲ್ಲಿ ಅಳತೆಯ ಕಾರ್ಯದ ಪೂರ್ವದಲ್ಲಿ ನೀಡಿರುವ ನೋಟಿಸ್ ಪ್ರತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ವಕೀಲರು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಬಗ್ಗೆ ವಿಚಾರಿಸಿದ್ದಿರಾ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.32/4 ರಲ್ಲಿ 3 ಪೋಡಿಗಳಾಗಿವೆ ಎಂದರೆ ಸರಿ. ಸದರಿ ಪೋಡಿಗಳು ಸರ್ವೆ ನಂ.32/4, ಸರ್ವೆ ನಂ.32/6 ಮತ್ತು ಸರ್ವೆ ನಂ.32/7. ಸಾಕ್ಷಿ ಮುುಂದುವರೆದು ಸರ್ವೆ ನಂ.32/4 ರಲ್ಲಿ 11 ಗುಂಟೆ ಜಮೀನು ಎತ್ತಿನಹೊಳೆ ಕಾಮಗಾರಿಗೆ ಭೂ ಸ್ವಾಧೀನ ಆಗಿಗಿರುತ್ತದೆ. ಸದರಿ ಪೋಡಿಗಳಲ್ಲಿ ಎಷ್ಟು ವಿಸ್ತೀರ್ಣಗಳು ಇವೆ ಎಂದರೆ ಸರ್ವೆ ನಂ.32/4 ರಲ್ಲಿ 11 ಗುಂಟೆ, ಸರ್ವೆ ನಂ.32/6 ರಲ್ಲಿ 26 ಗುಂಟೆ ಮತ್ತು ಸರ್ವೆ ನಂ.32/7 ರಲ್ಲಿ 37 ಗುಂಟೆ ಇರುತ್ತದೆ. ಭೂ ಸ್ವಾಧೀನ ಆಗಿರುವ 11 ಗುಂಟೆಯನ್ನು ಹೊರತುಪಡಿಸಿ 63 ಗುಂಟೆಯ ಬರುತ್ತದೆ ಆದರೆ ನಾನು 64 ಗುಂಟೆ ಎಂದು ಸರ್ವೆ ನಂ.32/6 ಮತ್ತು ಸರ್ವೆ ನಂ.32/7 ರಲ್ಲಿ ಬರೆಸಿದ್ದೇನೆಂದರೆ ಸದರಿ ಜಮೀನುಗಳನ್ನು ಸೇರಿಸಿ ಒಟ್ಟು 1 ಎಕರೆ 23 ಗುಂಟೆ ಇರುತ್ತದೆ. ಸರ್ವೆ ನಂ.32/6 ರಲ್ಲಿ 26 ಗುಂಟೆ ಬದಲಿಗೆ 27 ಗುಂಟೆ ಪಹಣಿಯನ್ನು ಬರೆಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದು ಗುಂಟೆ ಕರಾಬು ಇರುತ್ತದೆ.

ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದು, ಪೋಡಿಯ ಸಮಯದಲ್ಲಿ ಹೆಚ್ಚು ಕಮ್ಮಿಯಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ವಿರುದ್ಧ ಗುಬ್ಬಿಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರೆಂದರೆ ಸರಿ. ಸದರಿ ದಾವೆಯನ್ನು ಅವರು ಸರ್ವೆ ನಂ.32/4 ಜಮೀನಿಗೆ ಸಲ್ಲಿಸಿರುತ್ತಾರೆ. ಸದರಿ ದಾವೆಯನ್ನು ಪ್ರತಿವಾದಿಗಳು ಸರ್ವೆ ನಂ.32/5 ರ 1 ಎಕರೆ 23 ಗುಂಟೆಗೆ ಶಾಶ್ವತ ನಿರ್ಬಂದಕಾಜ್ಞೆ ದಾವೆ ಸಲ್ಲಿಸಿದ್ದಾರೆಂದರೆ ಸರಿ. ಪ್ರತಿವಾದಿಗಳು ಸಲ್ಲಿಸಿರುವ ದಾವೆಯು OS No.667/2022. ಸದರಿ ದಾವೆಯು ಇನ್ನು ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ ತಾತ್ಕಲಿಕ ನಿರ್ಬಂದಕಾಜ್ಞೆ ಆದೇಶ ಇದೆ ಎಂದರೆ ಇರಬಹುದು. ಸರ್ವೆ ನಂ.32/5 ರಲ್ಲಿ 1 ಎಕರೆ 23 ಗುಂಟೆ ಜಮೀನು ಪೌತಿ ವಾರಸು ಆಧಾರದ ಮೇಲೆ 1 ನೇ ಪ್ರತಿವಾದಿ ಚಂದ್ರಬಾಯಿ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಉತ್ತರ ದಿಕ್ಕಿನ 11 ಗುಂಟೆ ಜಮೀನು ವಿಶ್ವಶ್ವೇರಯ್ಯ ನಾಲೆಗೆ ಭೂ ಸ್ವಾಧೀನ ಆಗಿದ್ದು, ಉಳಿದ 1 ಎಕರೆ 23 ಗುಂಟೆಯಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಪೋಡಿ ಮಾಡಿಸಿಲ್ಲ ಮತ್ತು ಸರ್ವೆ ನಂ.32/5 ರಲ್ಲಿ ಇದ್ದಾರೆ. ಪ್ರತಿವಾದಿಗಳು ನನ್ನ ವಿರುದ್ಧ ತಾತ್ಕಲಿಕ ನಿರ್ಬಂದಕಾಜ್ಞೆ ಪಡೆದಿರುವ ಕಾರಣ ನಾನು ಅವರ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಜಮೀನಿನ ಮಣ್ಣನ್ನು ತೆಗೆದ ಕಾರಣ ಸಲ್ಲಿಸಿರುತ್ತೇನೆ.

ಲಕ್ಷ್ಮಣರಾವ್ /1 ನೇ ಪ್ರತಿವಾದಿಯ ಗಂಡ ನನ್ನ ದೊಡ್ಡಪ್ಪ. 1 ನೇ ಪ್ರತಿವಾದಿ ನನ್ನ ದೊಡ್ಡಮ್ಮ. ಅವರಿಬ್ಬರಿಗೆ 4 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು. ಸರ್ವೆ ನಂ.32/5 ರ 1 ಎಕರೆ 23 ಗುಂಟೆಯಲ್ಲಿ ಲಕ್ಷ್ಮಣರಾವ್ ಮತ್ತು 1 ನೇ ಪ್ರತಿವಾದಿಯ ಎಲ್ಲಾ ಮಕ್ಕಳು ವಾರಸುದಾರರು ಎಂದರೆ ಇರಬಹುದು. ಈ ದಾವೆಯಲ್ಲಿ ನಾನು ಹೆಣ್ಣು ಮಕ್ಕಳನುನ ಸೇರಿಸಿಲ್ಲ ಎಂದರೆ ಸರಿ.

ಪ್ರತಿವಾದಿಗಳು ತುಮಕೂರಿನ DDLR ರವರ ಮುಂದೆ ಸರ್ವೆ ನಂ.32 ಜಮೀನಿನ ಒಟ್ಟು ವಿಸ್ತೀರ್ಣದ 11 ಎಕರೆ 19 ಗುಂಟೆ ಪೋಡಿಯ ವಿಸ್ತೀರ್ಣಗಳು ಸರಿ ಇಲ್ಲ ಎಂದು ಅರ್ಜಿ ಸಲ್ಲಿಸಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕೆ ಸಂಭಂದಿಸಿದಂತೆ ನನಗೆ ನೋಟಿಸ್ ಬಂದಿದ್ದು, ನಾನು ನಿನ್ನೆ ಸದರಿ ಅರ್ಜಿಯಲ್ಲಿ ಹಾಜರಾಗಿರುತ್ತೇನೆ. ಸರ್ವೆ ನಂ.32

ರ 11 ಎಕರೆ 19 ಗುಂಟೆಯಲ್ಲಿ ಒಟ್ಟು 9 ಪೋಡಿಗಳಾಗಿವೆ. ಸದರಿ ಪೋಡಿಗಳು ಸರಿ ಇಲ್ಲ ಎಂದು ಇರುವ ಮಾಹಿತಿ ನನಗೆ ಇದೆ ಎಂದರೆ ಪೋಡಿಗಳು ಸರಿಯಾಗಿ ಇವೆ. ನಾನು ಮೇ-2020 ರಲ್ಲಿ ಅಳತೆಗೆ ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು 2024 ರಲ್ಲಿ ಸರ್ವೆ ನಂ.32/6 ಮತ್ತು ಸರ್ವೆ ನಂ.32/7 ರ ಅಳತೆಗೆ ಅರ್ಜಿ ಸಲ್ಲಿಸಿದ್ದೇನು ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಅಳತೆ ಕಾರ್ಯಕ್ಕೆ ಬಿಡುತ್ತಿಲ್ಲ. OS No.667/2022 ದಾವೆ ಚಾಲ್ತಿಯಲ್ಲಿ ಇರುವ ಕಾರಣ ಅನುಮತಿ ಇರುವುದಿಲ್ಲ ಎಂದು ವರದಿ ಕೊಟ್ಟಿದ್ದಾರೆಂದರೆ ಸರಿಯಲ್ಲ. ಸದರಿ ವರದಿಗೆ ನಾನು ಸಹಿ ಮಾಡಿದ್ದೇನೆಂದರೆ ಸರಿ. ಮೇ-2020 ರಲ್ಲಿ ನಾನು ಯಾವುದೇ ಅಳತೆಗೆ ಅರ್ಜಿ ಕೊಟ್ಟಿರುವುದಿಲ್ಲ ಹಾಗೂ ಅಳತೆ ಮಾಡಲು ಸಿಬ್ಬಂದಿಗಳು ಬರದೆ ಇದ್ದರು ಸಹ ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸರ್ವೆ ಅಧಿಕಾರಿಯವರು ಪ್ರತಿವಾದಿಗಳು ನನ್ನ ಜಮೀನಿನಲ್ಲಿ 13 ಗುಂಟೆ ಒತ್ತುವರಿ ಮಾಡಿರುವ ಬಗ್ಗೆ ಯಾವುದೇ ವರದಿ ನೀಡದೆ ಇದ್ದರು ಸಹ ನಾನು ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi